"ಪುರಾಣಗಳಲ್ಲಿ ಭಕ್ತಿ" ಒಂದು ವಿಮರ್ಶಾತ್ಮಕ ಅಧ್ಯಯನ

ಅಧ್ಯಾಯ 1

ಪುರಾಣಗಳು

ಪೀಠಿಕೆ:

ಪುರಾಣಗಳು ನಮ್ಮ ಭಾರತದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ನಮ್ಮ ನಾಡಿನ ಹಿರಿಯರು ಹೇಗೆ ಬದುಕಿದ್ದರು ಅವರು ಹೇಗೆ ಜೀವನವನ್ನು ಸಾಗಿಸುತ್ತಿದ್ದರು ಎಂಬ ವಿಷಯವು ನಮಗೆ ಪುರಾಣಗಳಿಂದ ತಿಳಿಯುತ್ತದೆ. ಇದಲ್ಲದೆ ಹಿಂದೂ ಶಾಸ್ತ್ರದ ಪ್ರಧಾನವಾದ ಅಂಶವು ಕೂಡಾ ಆಗಿದೆ. ಉಪನಿಷತ್ತುಗಳ ಸೂಕ್ಷ್ಮಭಾವನೆಗಳು ಕೂಡಾ ಪುರಾಣಗಳಿಂದ ತಿಳಿಯುತ್ತದೆ. ಈ ಪ್ರಪಂಚದ ಪೂರ್ವಸ್ಥಿತಿಯು ಯಾವ ರೀತಿಯಾಗಿ ಇತ್ತು ಎಂಬ ವಿಷಯವನ್ನು ಪುರಾಣಗಳು ಪ್ರತಿಪಾದಿಸುತ್ತವೆ. ದಾಸಗುಪ್ತರು ಹೇಳುವ ರೀತಿಯಲ್ಲಿ ಪ್ರಸ್ಥಾನತ್ರಯದಲ್ಲಿ ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಈ ಮೂರನ್ನು ಸೇರಿಸಿದ್ದಾರೆ ಆದರೆ ಎಂದೂ ಪುರಾಣಗಳನ್ನು ಸೇರಿಸಿಲ್ಲ. ಪುರಾಣಗಳನ್ನು ಸೇರಿಸಿದ್ದರೆ ಇನ್ನೂ ಹೆಚ್ಚಿನ ಮಹತ್ವವನ್ನು ಪಡೆಯಬಹುದು. ಪುರಾಣಗಳ ಉಲ್ಲೇಖಗಳು ವೈದಿಕ ಗ್ರಂಥಗಳಲ್ಲಿ ಕೂಡಾ ಕಂಡು ಬರುತ್ತದೆ. ಉದಾಹರಣೆಗೆ ಅಥರ್ವವೇದದಲ್ಲಿ " ऋचः सामानि छंदांसि पुराणं यजुषा सह । उच्छिष्टा जज्ञिरे दिवि देव दिविन्रिता " – ಎಂಬುದಾಗಿ ಹೇಳಲ್ಪಟ್ಟಿದೆ.

ಇದಲ್ಲದೆ ಜನರಿಗೆ ಪರಮಾತ್ಮನ ತತ್ವದ ಬೆಳಕನ್ನು ಸುಲಭವಾಗಿ ದೊರಕಲು ಪುರಾಣಗಳ ರಚನೆಯಾಯಿತು. ಇವುಗಳ ಜೊತೆಗೆ ರಾಜನೀತಿ, ಐಹಿಕ ಪಾರಲೌಕಿಕ ಅಭ್ಯುದಯ ಪ್ರಾಪ್ತಿ ಇದಕ್ಕೆ ಸಂಬಂಧಪಟ್ಟ ವಿವರಣೆಯು ಕೂಡಾ ಕಂಡುಬರುತ್ತದೆ. ಸಾರ್ಥಕ ಬದುಕನ್ನು ನಡೆಸುವುದಕ್ಕೋಸ್ಕರ ಈ ಪುರಾಣಗಳ ಜ್ಞಾನದ ಅಗತ್ಯವಿದೆ. ಇವೆಲ್ಲವೂ ಒಂದನೇ ಅಧ್ಯಾಯದ ವಿಷಯಗಳಾಗಿವೆ.

ಉದ್ದೇಶ :

ಪುರಾಣಗಳು ಅತೀ ಪ್ರಾಚೀನತಮವಾದ ಗ್ರಂಥರಾಶಿಗಳಾಗಿವೆ. ಈ ಪುರಾಣಗಳಲ್ಲಿ ಜ್ಞಾನ ಮತ್ತು ಭಕ್ತಿ ಇವುಗಳ ಸಮನ್ವಯವು ಕಂಡುಬರುತ್ತದೆ. ವೈದಿಕ ಸಾಹಿತ್ಯದ ಸಾರವನ್ನು ಸಾಮಾನ್ಯ ಜನರಿಗೆ ತಲುಪಿಸುವಂತಹ ಮಹತ್ಕಾರ್ಯವನ್ನು ಪುರಾಣಗಳು ಮಾಡುತ್ತವೆ. ವಿವಿಧ ಕಥೆಗಳ ಮೂಲಕ ಧರ್ಮ, ಸಂಸ್ಕೃತಿ ಮತ್ತು ದೇವತಾಭಾವನೆಗಳನ್ನು ಜನರಿಗೆ ತಿಳಿಸುವಂತಹ ಮಹತ್ಕಾರ್ಯಗಳನ್ನು ಪುರಾಣಗಳು ಮಾಡುತ್ತವೆ. ನಾವು ಮಾಡಿದ ತಪ್ಪುಗಳನ್ನು ಕ್ಷಮಿಸುವಂತಹ ಮಹದ್ಗುಣ ಭಗವಂತನಿಗಿದೆ. ಆ ಪರಮಾತ್ಮನನ್ನು ಯಾವ ರೀತಿಯಾಗಿ ಸ್ತುತಿಸಬಹುದು ಎಂಬುದರ ವಿವರಣೆಯು ಪುರಾಣಗಳಲ್ಲಿದೆ. ಇಲ್ಲಿ

१–अथर्ववेद –११–७–२५

ಭಕ್ತಿಯು ಪ್ರಧಾನ ಪಾತ್ರವಹಿಸುತ್ತದೆ ಪುರಾಣಗಳ ತತ್ವಸಾರವನ್ನು ಅರಿತು ಮಾನವನು ಸನ್ಮಾರ್ಗಾವಲಂಬಿಯಾಗಬೇಕು ಎಂಬ ಘನ ಉದ್ದೇಶವನ್ನು ಕೂಡಾ ಪುರಾಣಗಳು ಹೊಂದಿವೆ.

ಪ್ರಯೋಜನ :

ಮನುಷ್ಯನು ಯಾವ ರೀತಿಯಿಂದ ಜೀವನಮಾರ್ಗವನ್ನು ಅನುಸರಿಸಬೇಕು ಇದಕ್ಕೆ ಸಂಬಂಧಪಟ್ಟ ವಿಷಯವನ್ನು ಪುರಾಣಗಳು ತಿಳಿಸುತ್ತವೆ. ಇವುಗಳಲ್ಲದೆ ಆಧ್ಯಾತ್ಮತತ್ವಕ್ಕೆ ಬೇಕಾದ ವಿಷಯಗಳ ನಿರೂಪಣೆ ಕೂಡಾ ಪುರಾಣಗಳಿಂದ ನಮಗೆ ಲಭ್ಯವಾಗುತ್ತದೆ. ಮನುಷ್ಯನಿಗೆ ಯಾವಾಗಲೂ ಕಷ್ಟಗಳು ಬಂದೊದಗಿ ಅದಕ್ಕೆ ಪರಿಹಾರವನ್ನು ಕಾಣದೆ ಪರಿತಪಿಸುತ್ತಾನೆ. ಈ ಸಂದರ್ಭದಲ್ಲಿ ಪುರಾಣಗಳಿಂದ ಆತನ ಕಷ್ಟಗಳು ಪರಿಹಾರವಾಗುತ್ತದೆ.

ಅಧ್ಯಾಯ 2

ಭಕ್ತಿಯ ನಿರೂಪಣೆ

ಭಗವಂತನನ್ನು ಹುಡುಕಲು ಭಕ್ತಿಯು ಮುಖ್ಯವಾದ ಮಾರ್ಗವಾಗಿದೆ. ನಮಗೆ ಭಗವಂತನ ಮೇಲೆ ಇರುವ ಕ್ಷಣಿಕ ಪ್ರೇಮೋನ್ಮಾದವು ನಿತ್ಯ ಮುಕ್ತಿಯನ್ನು ದೊರಕಿಸಿ ಕೊಡುತ್ತದೆ. ನಾವು ಭಗವಂತನ ಮೇಲೆ ಯಾವ ರೀತಿಯಾದ ಪ್ರೇಮವನ್ನು ಇಡುತ್ತೇವೆಯೋ ಅದುವೇ ಭಕ್ತಿಯಾಗಿದೆ. ಈ ಭಕ್ತಿ ಎಂಬುದು ಜ್ಞಾನ ಮತ್ತು ಕರ್ಮ ಇವೆರಡಕ್ಕಿಂತಲೂ ಹೆಚ್ಚಾಗಿದೆ. ಮೋಕ್ಷವನ್ನು ಪಡೆಯಲು ಭಕ್ತಿ ಎಂಬುದು ಮುಖ್ಯ ಸಾಧನವಾಗಿದೆ. ಇದು ಜ್ಞಾನಿಗಳ ಮಾತಾಗಿದೆ. ನಾವು ಯಾವ ಭಗವಂತನನ್ನು ಸ್ಮರಿಸುತ್ತೇವೆಯೋ ಆತನು ಸಕಲವನ್ನು ತಿಳಿದವನಾಗಿರುವನು. ಭಕ್ತಿಗೆ ಸೇವಾ ಎಂಬ ಅರ್ಥವು ಕೂಡಾ ಇದೆ. ಯಾವ ಸಂದರ್ಭದಲ್ಲಿ ಭಗವಂತನ ದಯೆ ನಮ್ಮ ಮೇಲೆ ಬೀಳುತ್ತದೋ ಆಗ ನಾವು ಶುದ್ಧಾತ್ಮರಾಗುತ್ತೇವೆ. ಕಷ್ಟ ಬಂದಾಗ ಭಕ್ತನು ದೇವರ ಭಕ್ತಿಯನ್ನಲ್ಲದೆ ಬೇರೆ ಯಾವ ಈ ಪ್ರಪಂಚದ ವಸ್ತುವನ್ನು ಕೂಡಾ ಬಯಸುವುದಿಲ್ಲ. ಧರ್ಮರಾಯನಿಗೆ ತನ್ನ ವನವಾಸದ ಸಂದರ್ಭದಲ್ಲಿ ದೇವರಲ್ಲಿದ ಭಕ್ತಿ ಸ್ವಲ್ಪವೂ ಕಡಿಮೆಯಾಗಲಿಲ್ಲ. ಕಷ್ಟವು ಕಳೆದು ಹೋದ ಬಳಿಕ ಸುಖ ದೊರಕಬಹುದೆಂಬ ಅಚಲವಾದ ವಿಶ್ವಾಸ ಧರ್ಮರಾಯನ ಮನಸ್ಸಿನಲ್ಲಿತ್ತು.

ನಾರದರು ಭಕ್ತಿಯ ಬಗ್ಗೆ ಈ ರೀತಿ ಹೇಳಿರುವರು "Bhakthi consist of offering once every act to the supreme lord and feeling extreme distress in for getting him" [2] ಯಾವ ಸ್ಥಳದಲ್ಲಿ ನಾವು ಭಗವಂತ ನಾಮವನ್ನು ಉಚ್ಚಾರಮಾಡುತ್ತೇವೆಯೋ ಅದು ಪವಿತ್ರಸ್ಥಳವಾಗುತ್ತದೆ. ಇದಲ್ಲದೆ ಪರಮಾತ್ಮನನ್ನು ಒಲಿಸಿಕೊಳ್ಳಲು ಸಂಗೀತವು ಕೂಡಾ ಮುಖ್ಯ ಸಾಧನವಾಗಿದೆ.

2. Narada Bhakthi Suthra -By Madhwachary

ಶಂಕರಾಚಾರ್ಯರು ಜ್ಞಾನಯೋಗಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರೆ ರಾಮಾನುಜಾಚಾರ್ಯರು ಭಕ್ತಿಯೋಗಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ. ಇವೆಲ್ಲವುಗಳ ವಿವರಣೆ ಎರಡನೆಯ ಅಧ್ಯಾಯದಲ್ಲಿ ವಿವೃತವಾಗಿದೆ.

ಅಧ್ಯಾಯ 3

ಪುರಾಣಗಳಲ್ಲಿ ಭಕ್ತಿಯ ನಿರೂಪಣೆ

ಎಲ್ಲಾ ದಿಕ್ಕುಗಳಲ್ಲಿಯೂ ಕೂಡಾ ಪರಮಾತ್ಮನು ನೆಲೆಸಿದ್ದರೂ ಕೂಡಾ ಭಗವತ್ತತ್ವವು ನಿಗೂಢವಾಗಿದೆ. ನಾಮ, ರೂಪ ಇವುಗಳಿಂದ ಕೂಡಿರದ ಪರಬ್ರಹ್ಮನ ಉಪಾಸನೆ ಕಷ್ಟ. ಈ ಕಾರಣದಿಂದ ಪರಮಾತ್ಮನ ಉಪಾಸನೆ ಕಷ್ಟ. ಈ ಕಾರಣದಿಂದ ಪರಮಾತ್ಮನ ಪ್ರತಿರೂಪ ವಿಗ್ರಹ ಆರಾಧನೆ ಮಾಡುವುದು ಅಗತ್ಯ. ಇದಲ್ಲದೆ ಭಾಗವತ ಪುರಾಣದಲ್ಲಿ ವೈಜ್ಞಾನಿಕ ಭಕ್ತಿತತ್ತ್ವದ ವಿವರಣೆ ಕಂಡುಬರುತ್ತದೆ. ಭಾಗವತ ಪುರಾಣದಲ್ಲಿ ಶ್ರೀಕೃಷ್ಣನು ಉದ್ಧವನಿಗೆ ಮೋಕ್ಷ ಸಾಧನೆಯ ಮೂರು ಯೋಗಗಳನ್ನು ಹೇಳುತ್ತಾನೆ.

ಅವುಗಳು ಜ್ಞಾನ, ಕರ್ಮ ಮತ್ತು ಭಕ್ತಿ ಇವುಗಳಾಗಿವೆ. ಇವುಗಳ ಹೊರತಾಗಿ ಬೇರೆ ಉಪಾಯವಿಲ್ಲ.
“ योग शास्त्रो मया प्रोक्ता नृणं श्रेयो विधित्सदा । ज्ञानं कर्म च भक्तिश्च नोपायोन्योऽस्ति कुत्रचित् । ” – ३
ಈ ಮನುಷ್ಯ ಜನ್ಮವು ಜ್ಞಾನ ಮತ್ತು ಭಕ್ತಿ ಇವುಗಳನ್ನು ಗಳಿಸಿಕೊಡುವ ಸಾಧನವಾಗಿದೆ ಕರ್ಮಗಳು ದುಃಖಪ್ರದವೆಂದು ತಿಳಿದು ಯಾವ ಮನುಷ್ಯನು ಅದರ ಫಲದಲ್ಲಿ ಆಸೆಪಡುವುದಿಲ್ಲವೋ ಅವರಿಗೆ ಜ್ಞಾನಯೋಗವಿದೆ.

ಬ್ರಹ್ಮತತ್ವದ ವಿಚಾರವು ವಿಷ್ಣುಪುರಾಣದಲ್ಲಿ ನಿರೂಪಿತವಾಗಿದೆ. ಈ ಬ್ರಹ್ಮದಲ್ಲಿ ಶಬ್ದಬ್ರಹ್ಮ ಮತ್ತು ಪರಬ್ರಹ್ಮ ಈ ರೀತಿಯಾಗಿ ಎರಡು ವಿಧವಿದೆ. ಮರಣದ ಸಮಯದಲ್ಲಿ ಯಾವ ಮನುಷ್ಯನು ಪರಮಾತ್ಮನ ನಾಮಸ್ಮರಣೆಯನ್ನು ಮಾಡುತ್ತಾನೋ ಅವನ ಎಲ್ಲಾ ಪಾಪಗಳು ಪರಿಹಾರವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಭಾಗವತ ಪುರಾಣದ ಎರಡನೇ ಅಧ್ಯಾಯದಲ್ಲಿ ಅಜಾಮಿಳನ ಕಥೆಯು ನಿರೂಪಿತವಾಗಿದೆ. ಕಷ್ಟಗಳಿಂದ ಪಾರಾಗಲು ಪರಮಾತ್ಮನ ಧ್ಯಾನದಲ್ಲಿ ತೊಡಗುವುದು ಅನಿವಾರ್ಯವಾಗಿದೆ.

ಗರುಡ ಪುರಾಣದ ನಾಲ್ಕನೆಯ ಅಧ್ಯಾಯದಲ್ಲಿ ಮರಣದ ಕಾಲದಲ್ಲಿ ಭಗವಂತನ ನಾಮಸ್ಮರಣೆಯ ಮಹಾತ್ಮೆಯು ನಿರೂಪಿತವಾಗಿದೆ. ನಾರದ ಪುರಾಣದ ನಾಲ್ಕನೆಯ ಅಧ್ಯಾಯದಲ್ಲಿ ಶೌನಕರು ಭಕ್ತಿಯ

३–भागवत पुराण ३–२०–६

ಮಹತ್ತ್ವದ ಕುರಿತಾಗಿ ತಿಳಿಸಿರುವರು. ಅವರು ಈ ರೀತಿಯಾಗಿ ಹೇಳಿರುವರು. "ಭಗವಂತನು ಸಂತೋಷಗೊಳ್ಳಲು ಮುಖ್ಯ ಸಾಧನವೇ ಶ್ರದ್ಧೆಯಾಗಿದೆ. ಅವರು ಹೇಳುವ ರೀತಿಯಲ್ಲಿ ನಾವು ಭಗವಂತನಲ್ಲಿ ತೋರಿಸುವ ಭಕ್ತಿಯೇ ಶ್ರದ್ಧೆಯಾಗಿದೆ". ಈ ಭಕ್ತಿ ಎಂಬುದು ಇಲ್ಲದಿದ್ದರೆ ಯಾವ ಕೆಲಸದಲ್ಲಿಯೂ ಸಫಲತೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ನಾರದ ಪುರಾಣದ ಭಾಗ ಒಂದರಲ್ಲಿನ ಮೂವತ್ತಮೂರನೇ ಅಧ್ಯಾಯವು ಮೋಕ್ಷ ಪ್ರಾಪ್ತಿಯ ಕುರಿತಾಗಿ ತಿಳಿಸುತ್ತದೆ.

ಇವಲ್ಲದೆ ನಾರದರು ನಾರದ ಪುರಾಣದ ಭಾಗ ಒಂದರಲ್ಲಿನ ನಲುವತ್ತೊಂದನೇ ಅಧ್ಯಾಯದಲ್ಲಿ ಕಲಿಯುಗದಲ್ಲಿ ಧರ್ಮಕ್ಕಿಂತ ಹೆಚ್ಚಾಗಿ ಅಧರ್ಮವೇ ತಾಂಡವವಾಡುತ್ತದೆ ಎಂದು ಹೇಳಿರುವರು.

ಬ್ರಹ್ಮಪುರಾಣದ ಭಾಗ ಒಂದು ಇನ್ನೂರ ಇಪ್ಪತ್ತೈದನೇ ಅಧ್ಯಾಯವು ಶ್ರೀಕೃಷ್ಣನ ಆರಾಧನೆಯಿಂದ ಸಿಗುವ ಫಲದ ಬಗ್ಗೆ ತಿಳಿಸುತ್ತದೆ. ಮತ್ತು ಶ್ರೀಹರಿಯಲ್ಲಿ ಭಕ್ತಿಯು ಯಾವ ಪುಣ್ಯಕರ್ಮದಿಂದ ಉಂಟಾಗುತ್ತದೆ ಎಂಬುದನ್ನು ತಿಳಿಸುತ್ತದೆ. ಇವೆಲ್ಲವು ಕೂಡಾ ಈ ಅಧ್ಯಾಯದ ಮುಖ್ಯ ವಿಷಯಗಳಾಗಿವೆ.

ಅಧ್ಯಾಯ 4
ನವಧಾ ಭಕ್ತಿ

ಭಕ್ತಿಯನ್ನು ಎಲ್ಲರೂ ಜಾತಿಭೇದವಿಲ್ಲದೆ ಮಾಡಬಹುದು. ಭಕ್ತಿಯಿಂದ ಮನುಷ್ಯನ ಕೆಟ್ಟಗುಣಗಳು ನಾಶವಾಗಿ ಆತನು ತನ್ನೆಲ್ಲಾ ದುಃಖಗಳಿಂದ ದೂರವಾಗಿ ಪರಮಪವಿತ್ರನಾಗುತ್ತಾನೆ. ಈಶ್ವರನ ಭಕ್ತಿಯಲ್ಲಿ ವಯಸ್ಸು, ರೂಪ, ವಿದ್ಯೆ ಮತ್ತು ಧನ ಇವು ಯಾವುದಕ್ಕೂ ಬೆಲೆ ಇಲ್ಲ. ಭಕ್ತಿ ಎಂಬುದು ಕೇವಲ ಪ್ರೇಮವನ್ನು ಮಾತ್ರ ನೋಡುತ್ತದೆ. ಪರಮಾತ್ಮನನ್ನು ಒಂಭತ್ತು ವಿಧದ ಮೂಲಕ ಸ್ತುತಿಸುವುದು ನವಧಾ ಭಕ್ತಿಯಾಗಿದೆ. ಒಂಭತ್ತು ಪ್ರಕಾರದ ಭಕ್ತಿಯನ್ನು ತಿಳಿಸುವ ಶ್ಲೋಕ- श्रवणं कीर्तनं विष्णोः स्मरणं पादसेवनम् । अर्चनं वन्दनं दास्यं सख्यमात्मनिवेदनम् ॥ – ४

ಭಗವಂತನಾದ ಶ್ರೀಹರಿಯ ಹೆಸರು, ರೂಪ, ಗುಣ ಮತ್ತು ಮಹಾತ್ಮ್ಯೆಯ ಶ್ರವಣ, ಕೀರ್ತನೆ ಮತ್ತು ಸ್ಮರಣೆ ಅದೇ ರೀತಿ ಪರಮಾತ್ಮನ ಪಾದಸೇವೆ, ಪೂಜೆ, ವಂದನೆ ಮತ್ತು ಪರಮಾತ್ಮನಲ್ಲಿ ದಾಸ್ಯಭಾವ, ಸಖ್ಯಭಾವ ಮತ್ತು ತನ್ನನ್ನು ಭಗವಂತನಲ್ಲಿ ಸಮರ್ಪಿಸಿಕೊಳ್ಳುವುದು. ಇವು ನವವಿಧ ಭಕ್ತಿ ಎಂದು ಕರೆಯಲ್ಪಡುತ್ತದೆ. ಪರಮಾತ್ಮನ ನಾಮ ರೂಪ ಗುಣ ಕಥೆಗಳನ್ನು ಶ್ರದ್ಧೆಯಿಂದ ಕೇಳುವುದು ಶ್ರವಣ

४–नवधा भक्तिः ७–५–२३

ಭಕ್ತಿಯಾಗಿದೆ. ಭಕ್ತಿಯಿಂದ ಭಗವಂತನ ಚರಿತ್ರೆಯನ್ನು ಹೇಳುವುದು ಕೀರ್ತನ ಭಕ್ತಿಯಾಗಿದೆ. ಭಗವಂತನ ಕಥೆಗಳನ್ನು ಕೇಳಿದ ನಂತರ ಮತ್ತು ಹೇಳಿದ ಬಳಿಕ ಎಲ್ಲವನ್ನು ಮರೆತು ಭಗವಂತನ ಸ್ವರೂಪದಲ್ಲಿ ಲೀನವಾಗುವುದು ಸ್ಮರಣ ಭಕ್ತಿಯಾಗಿದೆ.

ಭಗವಂತನ ಚರಣವನ್ನು ದರ್ಶನ ಮಾಡುವುದು, ಚರಣ ತೀರ್ಥವನ್ನು ತೆಗೆದುಕೊಳ್ಳುವುದು ಇವೇ ಮೊದಲಾದವುಗಳು ಪಾದ ಸೇವನ ಭಕ್ತಿಯಾಗಿದೆ ಭಗವಂತನ ಮೂರ್ತಿಯನ್ನು ಶ್ರದ್ಧಾಭಕ್ತಿಯಿಂದ ಸೇವೆ ಮಾಡುವುದು ಅರ್ಚನಭಕ್ತಿಯಾಗಿದೆ.

ಭಗವಂತನ ಸ್ವರೂಪ, ಮೂರ್ತಿ ಮತ್ತು ಚರಣಗಳನ್ನು ಶ್ರದ್ಧೆಯಿಂದ ನಮಸ್ಕರಿಸುವುದು ವಂದನಭಕ್ತಿಯಾಗಿದೆ. ಭಗವಂತನ ಗುಣ ರಹಸ್ಯ, ಪ್ರಭಾವವನ್ನು ತಿಳಿದು ಶ್ರದ್ಧೆ ಮತ್ತು ಭಕ್ತಿಯಿಂದ ಕೂಡಿ ಆತನ ಸೇವೆಯನ್ನು ಮಾಡುವುದು ದಾಸ್ಯ ಭಕ್ತಿಯಾಗಿದೆ. ದಾಸ್ಯಭಕ್ತಿಯಿಂದ ಭಗವಂತನ ಸಾಮಿಪ್ಯ ಹೊಂದಲು ಸಾಧ್ಯವಾಗುತ್ತದೆ. ಪರಮಾತ್ಮನಲ್ಲಿ ಹೆಚ್ಚಿನ ಪ್ರೇಮವಿರಿಸಿಕೊಳ್ಳುವುದು ಸಖ್ಯಭಕ್ತಿಯಾಗಿದೆ. ಪರಮಾತ್ಮನ ಮಹಿಮೆಯನ್ನರಿತು ತನು–ಮನ–ಧನಗಳಿಂದ ತನ್ನೆಲ್ಲಾ ಕೆಲಸಗಳನ್ನು ಭಗವಂತನಿಗೆ ಅರ್ಪಿಸುವುದು ಆತ್ಮನಿವೇದನ ಭಕ್ತಿಯಾಗಿದೆ. ಇವೆಲ್ಲವುಗಳ ವಿವರಣೆ ಮಹಾಪ್ರಬಂಧದಲ್ಲಿ ನಿರೂಪಿತವಾಗಿದೆ.

ಅಧ್ಯಾಯ 5

ಪುರಾಣಗಳಲ್ಲಿ ಭಕ್ತಿಯ ವಿಮರ್ಶೆ

ಭವಿಷ್ಯ ಪುರಾಣದ ಭಾಗ ಒಂದು ಅಧ್ಯಾಯ ಎರಡು ಗುರುಭಕ್ತಿ ಮತ್ತು ಮಾತಾಪಿತೃಗಳ ಭಕ್ತಿ ಇವುಗಳ ಕುರಿತಾಗಿ ತಿಳಿಸುತ್ತದೆ. ಗುರುಭಕ್ತಿಯಲ್ಲಿ ಗುರುಗಳ ಮಹತ್ತ್ವದ ಕುರಿತಾಗಿ ವಿವೃತವಾಗಿದೆ ಗುರುಗಳಿಗೆ ಯಾವ ರೀತಿ ಗೌರವವನ್ನು ಕೊಡಬೇಕು ಎಂಬುದರ ವಿವರಣೆಯು ನಿರೂಪಿತವಾಗಿದೆ. ಪಿತೃಭಕ್ತಿಯ ಕುರಿತು ಹೀಗೆ ಹೇಳಲ್ಪಟ್ಟಿದೆ. ಒಂದು ಮಗುವು ಜನಿಸಿದ ಬಳಿಕ ಅದು ಬೆಳೆದು ದೊಡ್ಡದಾಗುವ ತನಕ ತಂದೆ ತಾಯಿಯರು ದೈಹಿಕ ಮತ್ತು ಮಾನಸಿಕವಾಗಿ ತುಂಬಾ ಕಷ್ಟವನ್ನು ಅನುಭವಿಸುತ್ತಾರೆ. ಇದಕ್ಕೆ ಪರಿಹಾರವಾಗಿ ನಾವು ಅವರ ಸೇವೆಯನ್ನು ಮಾಡುವುದು ಅನಿವಾರ್ಯವಾಗಿದೆ.

ಸೂರ್ಯಪೂಜೆಯ ಕುರಿತು ಭವಿಷ್ಯ ಪುರಾಣದ ತೊಂಭತ್ತಮೂರನೆಯ ಅಧ್ಯಾಯವು ತಿಳಿಸುತ್ತದೆ ಸೂರ್ಯದೇವನ ಪೂಜಾಕ್ರಮದ ವಿಷಯವನ್ನು ಬ್ರಹ್ಮನು ದಿಂಡಿ ಎಂಬ ಋಷಿಗೆ ತಿಳಿಸುತ್ತಾನೆ. ಈ ಜಗತ್ತಿನಲ್ಲಿರುವ ಮಾನವರು ಸಂಸಾರವೆಂಬ ಸಾಗರದಲ್ಲಿ ತುಂಬಾ ಕಷ್ಟವನ್ನನುಭವಿಸುತ್ತಾರೆ. ಇದಕ್ಕೆ ಪರಿಹಾರ ಸೂರ್ಯದೇವನ ಆರಾಧನೆಯಾಗಿದೆ ಇದರಿಂದ ಮನುಷ್ಯರು ಸದ್ಗತಿಯನ್ನು ಗಳಿಸುವರು. ಭವಿಷ್ಯ ಪುರಾಣದ ಎರಡನೇ ಭಾಗ ಪ್ರತಿಸರ್ಗಪರ್ವ ದ್ವಿತೀಯ ಖಂಡ ಇಪ್ಪತ್ತನಾಲ್ಕನೆಯ ಅಧ್ಯಾಯದಿಂದ ಇಪ್ಪತ್ತೊಂಭತ್ತನೇ ಅಧ್ಯಾಯದವರೆಗೆ ಸತ್ಯನಾರಾಯಣ ವ್ರತದ ಕಥೆಯು ನಿರೂಪಿತವಾಗಿದೆ. ಸತ್ಯನಾರಾಯಣ ಸ್ವಾಮಿಯನ್ನು ಒಲಿಸಿಕೊಳ್ಳಲು ಸತ್ಯನಾರಾಯಣ ಪೂಜೆಯು ಹೆಚ್ಚು ಪ್ರಮುಖವಾಗಿದೆ. ಇದರಲ್ಲಿ ಸತ್ಯನಾರಾಯಣ ಪೂಜೆ ಮತ್ತು ಅದಕ್ಕೆ ಸಂಬಂಧಪಟ್ಟ ಕಥೆಯು ನಿರೂಪಿತವಾಗಿದೆ.

ಈ ಸಂಸಾರ ಸಾಗರದಿಂದ ಪಾರಾಗಬೇಕೆಂದು ಬಯಸುವವನು ಜನಾರ್ದನನಲ್ಲಿ ಆತ್ಮೀಯ ಭಾವನೆಯಿಂದ ಇರಬೇಕಾಗುತ್ತದೆ. ಸರ್ವರಿಗೂ ಅವರವರಿಗೆ ಕೊಟ್ಟ ಕೆಲಸದಿಂದ ಸಂತೋಷವಾದರೆ ಅದನ್ನೇ ನಾವು ನಿಜವಾದ ಹರಿಭಕ್ತಿ ಎಂದು ಹೇಳಬಹುದು–

सर्वागमनमाचरः प्रथमः परिकल्पित ।
आचारा प्रथमो धर्मः धर्मस्य प्रभुश्च्युतः ॥ – ५

ಸಕಲ ಶಾಸ್ತ್ರಗಳಲ್ಲಿ ಒಳ್ಳೆಯ ಆಚಾರವೇ ಪ್ರಥಮ ಕರ್ತವ್ಯ ಈ ರೀತಿಯಾಗಿ ವೇದವು ವಿವರಣೆ ನೀಡಿದೆ. ಆಚಾರದಿಂದ ಧರ್ಮಪರವಾಗಿ ಇರುವನು. ಧರ್ಮಕ್ಕೆ ಅಚ್ಯುತನೇ ಒಡೆಯನು.

ಹೀಗೆ ನಾರದ ಪುರಾಣದಲ್ಲಿ ನಿರೂಪಿತವಾಗಿದೆ. ಧರ್ಮಕ್ಕೆ ವಿರುದ್ಧವಾಗದ ರೀತಿಯಲ್ಲಿ ಪರಮಾತ್ಮನಲ್ಲಿ ಆತ್ಮೀಯತೆ ಬೆಳೆಸಿಕೊಳ್ಳಬೇಕು. ತನ್ನ ಧರ್ಮ ಮತ್ತು ಒಳ್ಳೆಯ ಆಚಾರಗಳಿಲ್ಲದಿದ್ದರೆ ಅದು ಅಭಕ್ತಿ ಎನಿಸುವುದು. ಭಕ್ತಿಯ ಜೊತೆಗೆ ಉತ್ತಮವಾದ ಕರ್ತವ್ಯವೂ ಮುಖ್ಯವಾಗಿದೆ.

५–नारद पुराणम् – अध्याय–१५ श्लोकः – १५४

ಇದಲ್ಲದೆ ಉತ್ತಮವಾದ ಕಥೆಗಳ ಮೂಲಕವೂ ಪುರಾಣಗಳಲ್ಲಿ ಭಕ್ತಿಯು ನಿರೂಪಿತವಾಗಿದೆ. ಇದಕ್ಕೆ ಜಾಂಬವತಿಯ ಕಥೆ ಮತ್ತು ವ್ಯಾಧಕರ್ಮನ ಕಥೆ ಇವೇ ಮೊದಲಾದುವನ್ನು ಕೊಡಬಹುದು. ಭಾಗವತ ಪುರಾಣವು ಭಕ್ತಜನರ ಲಕ್ಷಣಗಳ ಬಗ್ಗೆ ತಿಳಿಸುತ್ತದೆ ಇದನ್ನು ಹನ್ನೊಂದನೇ ಅಧ್ಯಾಯವು ತಿಳಿಸುತ್ತದೆ. ನಾರದ ಪುರಾಣದ ಮೂವತ್ತನೇ ಅಧ್ಯಾಯವು ಪ್ರಾಯಶ್ಚಿತ್ತ ಕರ್ಮಗಳ ಬಗ್ಗೆ ತಿಳಿಸುತ್ತದೆ. ವಿವಿಧ ರೀತಿಯ ವ್ರತಗಳ ಕುರಿತಾಗಿ ವರಾಹ ಪುರಾಣವು ತಿಳಿಸುತ್ತದೆ. ತೀರ್ಥಕ್ಷೇತ್ರಗಳ ಮಹತ್ತ್ವದ ಕುರಿತಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಕಥೆಗಳನ್ನು ವರಾಹ ಪುರಾಣದ ನೂರಮೂರನೇ ಅಧ್ಯಾಯವು ತಿಳಿಸುತ್ತದೆ. ದೇವಸ್ಥಾನವನ್ನು ಕಟ್ಟಿಸುವುದರಿಂದ ದೊರಕುವ ಫಲದ ಕುರಿತಾಗಿ ಅಗ್ನಿಪುರಾಣದ ಐದನೆಯ ಅಧ್ಯಾಯವು ತಿಳಿಸುತ್ತದೆ. ಪರಿಮಳದಿಂದ ಕೂಡಿರುವ ಹೂಗಳನ್ನು ಉಪಯೋಗಿಸಿಕೊಂಡು ಯಾರು ದೇವತಾಪೂಜೆಯನ್ನು ಮಾಡುತ್ತಾರೋ ಅವರು ಎಂದಿಗೂ ನರಕಕ್ಕೆ ಹೋಗುವುದಿಲ್ಲವೆಂದು ಅಗ್ನಿಪುರಾಣದ ಇಪ್ಪತ್ತಾರನೆಯ ಅಧ್ಯಾಯವು ತಿಳಿಸುತ್ತದೆ. ಅಗ್ನಿಪುರಾಣದ ನಲುವತ್ತೊಂಭತ್ತನೆಯ ಅಧ್ಯಾಯವು ಧ್ಯಾನ, ಧಾರಣೆಯ ಮತ್ತು ಸಮಾಧಿಯ ಕುರಿತಾಗಿ ತಿಳಿಸುತ್ತದೆ.

ಪುಣ್ಯವನ್ನು ಗಳಿಸುವ ಸಾಧನಗಳಲ್ಲಿ ಪುರಾಣ ಪಠಣವು ಒಂದಾಗಿದೆ. ಯಾವುದೇ ರೀತಿಯ ರೋಗಗಳು ಕೂಡಾ ಪುರಾಣಪಠಣದಿಂದ ದೂರವಾಗುತ್ತದೆ. ಒಟ್ಟಿನಲ್ಲಿ ಇವೆಲ್ಲವೂ ಕೂಡಾ ದೈವಿಕ ಭಕ್ತಿಯ ಪ್ರತೀಕಗಳಾಗಿವೆ ಎಂದು ಹೇಳಬಹುದು ಇವೆಲ್ಲವೂ ಕೂಡಾ ಐದನೆಯ ಅಧ್ಯಾಯದ ವಿಷಯಗಳಾಗಿವೆ.

ಅಧ್ಯಾಯ 6

ಉಪಸಂಹಾರ

ಭಾರತೀಯ ಸಂಸ್ಕೃತಿಗೆ ಪುರಾಣಗಳ ಕೊಡುಗೆ ಅಪಾರವಾಗಿದೆ. ವೈದಿಕ ಸಾಹಿತ್ಯದ ಸಾರವನ್ನು ಮನುಷ್ಯರಿಗೆ ತಲುಪಿಸುವ ಪ್ರಧಾನ ಕರ್ತವ್ಯವನ್ನು ಪುರಾಣಗಳು ಮಾಡುತ್ತವೆ. ಜನರ ಶ್ರೇಯಸ್ಸು ಮತ್ತು ಲೋಕಕಲ್ಯಾಣ ಇವೆರಡೂ ಕೂಡಾ ಪುರಾಣಗಳ ಮೂಲಕ ನಡೆಯುತ್ತದೆ ಎಂದು ಹೇಳಿದರೂ ತಪ್ಪಾಗಲಾರದು. ಮನುಷ್ಯನು ತನಗೆ ತಿಳಿದೋ ಅಥವಾ ತಿಳಿಯದೆಯೋ ತಪ್ಪನ್ನು ಮಾಡಿದರೆ ಅದಕ್ಕೆ ಬೇಕಾದ ಪರಿಹಾರಗಳು ಪುರಾಣಗಳಿಂದ ದೊರಕುತ್ತದೆ. ದೇವರು ಎಂದರೆ ನಮ್ಮೆಲ್ಲರನ್ನು

ನಿಯಂತ್ರಿಸುವವನು ಎಂದು ಹೇಳಬಹುದು ಆತನನ್ನು ಸಂತೋಷಗೊಳಿಸಲು ಭಕ್ತಿಯ ಅಗತ್ಯವಿದೆ. ಇವೆಲ್ಲವುಗಳ ವಿವರಣೆಯು ಪುರಾಣಗಳಲ್ಲಿ ನಿರೂಪಿತವಾಗಿದೆ.

ಈ ಸಂಸಾರವೆಂಬ ಮಹಾಸಾಗರವನ್ನು ದಾಟಲು ಪರಮಾತ್ಮನು ಭಕ್ತಿರೂಪವಾದ ವಿಶೇಷ ನೌಕೆಯನ್ನು ನಿರ್ಮಿಸಿರುವನು ಈ ನೌಕೆಯನ್ನು ಸ್ತ್ರೀಯರೂ ಶೂದ್ರರೂ ಅಲ್ಲದೆ ಎಲ್ಲರೂ ಪ್ರಯಾಣ ಮಾಡಿ ದಾಟಬಹುದು. ಆದಕಾರಣ ಪರಮಾತ್ಮನನ್ನು ಸಂತೃಪ್ತಿಪಡಿಸಲು ಭಕ್ತಿಯ ಅಗತ್ಯವಿದೆ. ಇದು ಒಂದು ಮತಕ್ಕೆ ಅಥವಾ ಒಂದು ಕರ್ಮಕ್ಕೆ ಸೀಮಿತವಾಗಿರದೆ ಇದಕ್ಕೆ ಎಲ್ಲರೂ ಅರ್ಹರಾಗಿರುವರು. ಅದರ ಜೊತೆಗೆ ಭಕ್ತಿಯಿಂದ ಕೂಡಿ ತನಗೆ ವಿಹಿತವಾದ ಕರ್ಮವನ್ನು ಮಾಡುವ ಅಗತ್ಯವಿದೆ. ಇವೆಲ್ಲವೂ ಕೂಡಾ ಜೀವನದ ಅಭಿವೃದ್ಧಿಗೆ ಕಾರಣವಾಗಿದೆ. ಇದುವೇ ಪುರಾಣಗಳಲ್ಲಿ ನಿರೂಪಿಸಲ್ಪಟ್ಟ ತತ್ತ್ವಸಾರವೂ ಕೂಡಾ ಆಗಿದೆ ಎಂದು ಹೇಳಬಹುದು.

ಪರಮಾತ್ಮನಿಂದಲೇ ಸಕಲೈಶ್ವರ್ಯಗಳು ದೊರಕುತ್ತದೆಂಬುದು ಸತ್ಯವಾಗಿದೆ. ಇವೆಲ್ಲವು ಕೂಡಾ ನಮ್ಮೆಲ್ಲರ ಯಶಸ್ಸಿಗೆ ನಾಂದಿಯಾಗಿದೆ. ಇವೆಲ್ಲವು ಕೂಡಾ ಆರನೆಯ ಅಧ್ಯಾಯದ ವಿಷಯಗಳಾಗಿ ನಿರೂಪಿತವಾಗಿದೆ.

ಗ್ರಂಥ ಋಣ

1. **ನಾರದ ಪುರಾಣ –** ಪಂಡರೀನಾಥಾಚಾರ್ಯ ಗಲಗಲಿ (ಭಾಗ–1) ಮುದ್ರಣ ಇಸವಿ 1997 ಮತ್ತು 1999 ಮುದ್ರಕರು : ಚ.ತಿ. ತಡಕೋಡ ಶ್ರೀ ಶಾರದಾ ಪ್ರಿಂಟಿಂಗ್ ಪ್ರೆಸ್ ತಡವಕೋಡ ಗಲ್ಲಿ, ಧಾರವಾಡ

2. **ಬ್ರಹ್ಮ ಮಹಾಪುರಾಣ –** ಶ್ರೀ ಪಂಡರೀನಾಥಾಚಾರ್ಯ ಗಲಗಲಿ (ಭಾಗ–1) ಪ್ರಕಾಶಕರು: ಕೆ. ಎಸ್. ಕುಲಕರ್ಣಿ ಬುಕ್ ಡಿಪೋ ಸ್ಟೇಶನ್ ರೋಡ್, ಹುಬ್ಬಳ್ಳಿ ಮುದ್ರಣ ಇಸವಿ – 1994
ಮುದ್ರಕರು : ಗಜಾನನ ಪ್ರಿಂಟಿಂಗ್ ಪ್ರೆಸ್, ಗದಗ

3. **ಬ್ರಹ್ಮ ಮಹಾಪುರಾಣ –** ಶ್ರೀ ಪಂಡರೀನಾಥಾಚಾರ್ಯ ಗಲಗಲಿ (ಭಾಗ–2)ಪ್ರಕಾಶಕರು : ವೈಭವ ಲಕ್ಷ್ಮೀ ಪ್ರಕಾಶನ ಸ್ಟೇಶನ್ ರೋಡ್, ಹುಬ್ಬಳ್ಳಿ ಮುದ್ರಣ ಇಸವಿ – 1996 ಮುದ್ರಕರು : ರತ್ನಾ ಪ್ರಿಂಟಿಂಗ್ ಗಂಗಾಧರ ನಗರ, ಹುಬ್ಬಳ್ಳಿ – 20

4. **ವರಾಹ ಪುರಾಣ ಪ್ರಬೋಧಿನಿ –** ಬಿ. ಎನ್. ಶ್ರೀಕಂಠಯ್ಯ ಮುದ್ರಣ ಇಸವಿ – 2015 ಪ್ರಕಾಶಕರು

5. **ನಾರದ ಮಹಾಪುರಾಣ –** ವಿದ್ವಾನ್ ಶ್ರೀರಂಗ ಹೆಗಡೆ (ಭಾಗ–2)ಪ್ರಕಾಶಕರು: ಶ್ರೀ ವೈಭವ ಲಕ್ಷ್ಮೀ ಪ್ರಕಾಶನ, ಹುಬ್ಬಳ್ಳಿ–20 ಮುದ್ರಣ ಇಸವಿ 2011 ಮುದ್ರಕರು: ರತ್ನಾ ಪ್ರಿಂಟರ್ಸ್, ಹುಬ್ಬಳ್ಳಿ–20

6. **ಭಾರತೀಯ ವಿಚಾರಧಾರಾ –** ಕುಳಮರ್ವ ವೆಂಕಪ್ಪ ಭಟ್ಟ ಮುದ್ರಣ:ಕೈಂತಜೆ ಪ್ರಕಾಶನ ಪೇರಮುಗೇರು ಮುದ್ರಣ ಇಸವಿ 1997 – 2010

7. **ಭವಿಷ್ಯ ಮಹಾಪುರಾಣ –** ಪಂಡರೀನಾಥಾಚಾರ್ಯ ಗಲಗಲಿ (ಭಾಗ–2) ಪ್ರಕಾಶಕರು : ಶ್ರೀ ವೈಭವ ಲಕ್ಷ್ಮೀ ಪ್ರಕಾಶನ C/o. ಕೆ. ಎಸ್. ಕುಲಕರ್ಣಿ ಬುಕ್ ಡಿಪೊ. ಸ್ಟೇಶನ್ ರೋಡ್, ಹುಬ್ಬಳ್ಳಿ ಮುದ್ರಕರು : ರತ್ನಾ ಪ್ರಿಂಟಿಂಗ್ ಗಂಗಾಧರ ನಗರ, ಹುಬ್ಬಳ್ಳಿ – 20 ಮುದ್ರಣ ಇಸವಿ – 1998

8. **ಭಾರತೀಯ ತತ್ತ್ವ ಚಿಂತನೆಯ ಆಕರಗಳು–**ವೇದವ್ರತ ಸಂಪಾದಕರು ಹಾಗೂ ಪ್ರಕಾಶಕರು: ವೇದವ್ರತ ವಿ.ಎಸ್ಸಿ,ಬಿ.ಎಡ್.ಎಂ.ಎ., ನಿವೃತ್ತ ಉಪನ್ಯಾಸಕರು 70 ಸಿದ್ದಲಿಂಗೇಶ್ವರ ಬಡಾವಣೆ ಜೆ.ಪಿ. ನಗರ ಮೈಸೂರು ಮುದ್ರಣ ಇಸವಿ – 2006 ಮುದ್ರಕರು : ನಂದಿಕೇಶ್ವರ ಆಫ್‌ಸೆಟ್ ಪ್ರಿಂಟರ್ಸ್ 387 ನ್ಯೂ ಸಯ್ಯಾಜಿ ರಾವ್ ರೋಡ್, ಮೈಸೂರು

9. **ಬ್ರಹ್ಮ ವೈವರ್ತ ಪುರಾಣ –** ಕೌಸಲ್ಯಾ ಬಾಯಿ ಪ್ರಕಾಶಕರು : ಶ್ರೀನಿಧಿ ಪಬ್ಲಿಕೇಶನ್ಸ್ – ಬೆಂಗಳೂರು ಮುದ್ರಣ : ಸಾಯಿ ಶ್ರೀನಿಧಿ ಪ್ರಿಂಟರ್ಸ್ ಮುದ್ರಣ ಇಸವಿ – 2016

10. **ಪರಾಭಕ್ತಿ –** ಸ್ವಾಮಿ ವಿವೇಕಾನಂದ ಪ್ರಕಾಶಕರು: ಅಧ್ಯಕ್ಷರು ಶ್ರೀರಾಮಕೃಷ್ಣಾಶ್ರಮ ಯಾದವಗಿರಿ, ಮೈಸೂರು ಮುದ್ರಣ ಇಸವಿ – 1996 ಮುದ್ರಕರು : ಕಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್, ರಾಜಾಜಿನಗರ, ಬೆಂಗಳೂರು

10\. Bhakthi Yoga - Swami Vivekananda, Publishers : Deepak Publications Ashok Vihar, Delhi ,Edition - 2016 Printers : Jai Maya Offset, Delhi

11. **ಗರುಡ ಪುರಾಣ –** ಶ್ರೀ ರಾಘವೇಂದ್ರ ಸಾರೋದ್ಧಾರ ಕುಲಕರ್ಣಿ ದಿದಿನಿ ಪ್ರಕಾಶಕರು : ಟಿ. ಎಸ್. ಸುರೇಶ್ ಮುದ್ರಣ : ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್, ಜೆ.ಪಿ. ನಗರ, ಬೆಂಗಳೂರು

12. **ಅಗ್ನಿ ಪುರಾಣ** – ಶ್ರೀಧರಾನಂದ ಪ್ರಕಾಶಕರು : ಪೂಜಾ ಪುಸ್ತಕ ಭಂಡಾರ, ಬೆಂಗಳೂರು
ಮುದ್ರಣ ಇಸವಿ – 2013 ಮುದ್ರಕರು : ಹರಿ ಓಂ ಪ್ರೆಸ್, ಬೆಂಗಳೂರು

13. **ಶ್ರೀ ಮದ್ಭಾಗವತ ಪುರಾಣ** – ಶ್ರೀ ಬಾಲಾಜಿ ಪ್ರಕಾಶನ ಬೆಳಗಾವಿ

14. **ಶ್ರೀ ಮದ್ಭಾಗವದ್ಗೀತಾ ತಾತ್ಪರ್ಯ** ಅಥವಾ ಜೀವನ ಧರ್ಮಯೋಗ–ಡಿ.ವಿ.ಜಿ. ಮುದ್ರಣ–ಪೂರ್ಣಿಮಾ ಪ್ರಿಂಟರ್ಸ್ ಬೆಂಗಳೂರು ಮುದ್ರಣ ಇಸವಿ –2007

ಮಾರ್ಗದರ್ಶಕರು ವಿದ್ಯಾರ್ಥಿ

ಡಾ. ನಾಗರಾಜ ಬಿ. **ಲಕ್ಷ್ಮೀಕಾಂತ ಪುಣಿಂಚಿತ್ತಾಯ ಪಿ.**